OS 3576/2007
PW1

ಸಾಕ್ಷಿಯನ್ನು ಈಹೊತ್ತು ದಿನಾಂಕ: 24.01.2020 ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು .

**ಪಾಟೀ ಸವಾಲು: 2, 3, 6 ಮತ್ತು 9 ನೇ ಪ್ರತಿವಾದಿ ಪರ ಶ್ರೀ ಎಂ ಎನ್ ಪಾರ್ ಆರ್ ಎ ಎಸ್ ವಕೀಲರಿಂದ:**

ಪ್ರತಿವಾದಿಯರನ್ನು ಕೂಗಿಸಲಾಗಿ ಗೈರು ಹಾಜರಿರುತ್ತಾರೆ . ವಕೀಲರು ಹಾಜರಿದ್ದು ವೇಳೆ ಕೇಳಿರುತ್ತಾರೆ . ರೋಜನಾಮೆಯನ್ನು ಪರಿಶೀಲಿಸಲಾಗಿ ಈಗಾಗಲೇ ಸಾಕಷ್ಟು ಕಾಲವಕಾಶ ನೀಡಲಾಗಿದೆ ಮಧ್ಯಂತರ ಅರ್ಜಿ ಮೇಲೆ ಆದ ಆದೇಶದ ಮೇರೆಗೆ ವೆಚ್ಚ ಭರಿಸುವ ಷರತ್ತಿನೊಂದಿಗೆ ಅವಕಾಶ ನೀಡಿದ್ದು , ಮುಂದೂಡಲು ಸಮಂಜಸ ಕಾರಣಗಳು ಇರುವುದಿಲ್ಲ . ಆದ್ದರಿಂದ ವಿನಂತಿಯನ್ನು ತಿರಸ್ಕರಿಸಿ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಯಿತು.

**ಪಾಟೀಸವಾಲು: 4 ನೇ ಪ್ರತಿವಾದಿ ಪರ ಶ್ರೀ ಕೆ ಎ ವಕೀಲರಿಂದ:**

ಪ್ರತಿವಾದಿ ಗೈರು ಹಾಜರಿದ್ದು ಪ್ರಾಕ್ಸಿ ವಕೀಲರು ಹಾಜರಿರುತ್ತಾರೆ , ಪಾಟೀಸವಾಲಿಗೆ ಅವಕಾಶ ನೀಡಲಾಯಿತು, ಆದ್ದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಯಿತು.

**ಪಾಟೀಸವಾಲು: 5 ಮತ್ತು 14 ನೇ ಪ್ರತಿವಾದಿ ಪರ ಶ್ರೀ ಜೆಜೆ ವಕೀಲರಿಂದ:**

ಕೂಗಿಸಲಾಗಿ ಪ್ರತಿವಾದಿಯರು ಮತ್ತು ವಕೀಲರು ಗೈರು ಹಾಜರಿರುತ್ತಾರೆ. ಆದ್ದರಿಂದ ಪಾಟೀಸವಾಲು ಇಲ್ಲವೆಂದು ಪರಿಗಣಿಸಲಾಯಿತು.

**ಪಾಟೀಸವಾಲು: 7 ನೇ ಪ್ರತಿವಾದಿ ಪರ ಶ್ರೀ ಎನ್ ಎಸ್ ಆರ್ ವಕೀಲರಿಂದ:**

OS 3576/2007
PW1

ಈ ಕೇಸಿನ ಪಾರ್ವತಮ್ಮ ರವರು ನನಗೆ ಹೆಂಡತಿಯಾಗಬೇಕು . ಸರ್ವೆ ನಂಬರ್ 105/2 ದಾಸನಹಳ್ಳಿ ಗ್ರಾಮದ ಜಮೀನಿನ ಪೈಕಿ ಗುಂಟೆ ಲೆಕ್ಕದಲ್ಲಿ ದಾವೆಯಲ್ಲಿ ಕೇಳಿರುತ್ತೇನೆ . ಚದುರಡಿ ಅಥವಾ ಯಾರ್ಡ್ ನಲ್ಲಿ ವಿಸ್ತೀರ್ಣವನ್ನು ಕಾಣಿಸಿರುವುದಿಲ್ಲ. ದಿ ಃ 05.03.2007 ರಂದು ಪಾರ್ವತಮ್ಮ ರವರು ಖರೀದಿ ಪತ್ರದ ಮೂಲಕ ಖರೀದಿಸಿರುತ್ತಾರೆ ಎನ್ನಲಾದ ದಿನಾಂಕದಂದು ಸರ್ವೆ ನಂಬರ್ 105/2 ಅಸ್ತಿತ್ವದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಹಾಗೆ ಅಸ್ತಿತ್ವದಲ್ಲಿ ಇಲ್ಲದ ಆಸ್ತಿಗೆ ಪಾರ್ವತಮ್ಮ ರವರು ಸುಳ್ಳು ಕ್ರಯಪತ್ರವನ್ನು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ವಾದಿಗೆ ಯಾವುದೇ ಹಕ್ಕು ಪ್ರಾಪ್ತವಾಗಿರುವುದಿಲ್ಲ ಎಂದರೆ ಸರಿಯಲ್ಲ .

2. ಸರ್ವೆ ನಂಬರ್ 105/2 ಎ ಪೋಡಿ ಆಗಿದೆ ಎಂದು ಹೇಳಿರತ್ತೇನೆ. ಸದರಿ ಹಿಸ್ಸೆ ಪುಟ್ಟಮ್ಮ ಎನ್ನುವ ಹೆಸರಿನಲ್ಲಿ ಇರಲಿಲ್ಲ ಮತ್ತು ಮುನಿಕದರಪ್ಪರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಆ ಮೇಲೆ ಮುನಿಕದರಪ್ಪರವರ ಅರ್ಜಿಯ ಆಧಾರದ ಮೇಲೆ ಸದರಿ ಜಮೀನನ್ನು ಕೃಷಿಯೇತರ ಜಮೀನಾಗಿ ಮಾರ್ಪಡಿಸಿರುತ್ತಾರೆ ಎಂದರೆ ಸಾಕ್ಷಿಯು ಬೋಗಸ್ ಮಾಡಿರುತ್ತಾರೆ ಎಂದು ಹೇಳುತ್ತಾರೆ.

3. ನನ್ನ ವಾದ ಪತ್ರ ಪ್ಯಾರಾ 7 ರಲ್ಲಿ ಹೇಳಿದದಂತೆ ದಿ ಃ 16.04.92 ರಂದು ಎಸ್ ಆರ್ 264/91-92 ರಂದು ಮುನಿಕದರಪ್ಪ ರವರ ಹೆಸರಿನಲ್ಲಿ

OS 3576/2007
PW1

ಎನ್ ಎ ಆಗಿರುತ್ತದೆ ಎಂದರೆ ಸರಿ . ಸಾಕ್ಷಿಯು ಪುಟ್ಟಮ್ಮರವರ ಹೆಸರಿನಲ್ಲಿ ಇವತ್ತಿಗೂ ಖಾತೆ ಇದ್ದು ಸುಳ್ಳು ಮಾಹಿತಿ ಕೊಟ್ಟು ಮಾಡಿಸಿರುತ್ತಾರೆ ಅದು ಗೊತ್ತಿಲ್ಲ ಎಂದು ಹೇಳುತ್ತಾರೆ . ಮುನಿಕದರಪ್ಪ ರವರು ಮಾಲೀಕರಿದ್ದ ಮೇರೆಗೆ ಅರ್ಜಿ ಕೊಟ್ಟು ಆ ರೀತಿ ಆದೇಶ ಮಾಡಿಸಿಕೊಂಡಿದ್ದು ಸುಳ್ಳು ಮಾಹಿತಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

4. ಮೇಲೆ ಹೇಳಿದ ಕನ್ವರ್ಷನ್ ಆದೇಶವನ್ನು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿಯಲ್ಲ. ಇದೇ ಕೇಸಿನಲ್ಲಿ ಮಾಡಿರುತ್ತೇನೆ . ಆ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಅಥವಾ ಕೆಎಟಿ ಗೆ ಅಪೀಲ್ ಹಾಕಿಲ್ಲ ಎಂದರೆ ಸರಿ . 4 ನೇ ಪ್ರತಿವಾದಿಗೆ ಮುನಿಕದರಪ್ಪರವರು ನೋಂದಾಯಿತ ಜಿಪಿಎ ಮೂಲಕ ಸರ್ವೆ ನಂಬರ್ 105/2 ಎ ನಲ್ಲಿ ಕನ್ವರ್ಷನ್ ಆದೇಶ ಪ್ರಕಾರ ಲೇ ಔಟ್ ಮಾಡಿರುವುದಕ್ಕೆ ಸಂಪೂರ್ಣ ಅಧಿಕಾರ ಕೊಟ್ಟಿರುತ್ತಾರೆ ಎಂದರೆ ಸುಳ್ಳು . 4 ನೇ ಪ್ರತಿವಾದಿ ಲೋಕೇಶ್ ರವರು ಈ ಜಮೀನು ಅಲ್ಲದೇ ಸುತ್ತ ಮುತ್ತಲಿನ ಪಿ ಎನ್ ಟಿ ಎಂಪ್ಲಾಯಿಸ್ ಅಸೋಸಿಯೇಷನ್ ವತಿಯಿಂದ ಕೂಡ ರೆಸಿಡೆನ್ಸಿ ಲೇ ಔಟ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಸುಮಾರು 300 ನಿವೇಶನಗಳನ್ನು ಸೈಟ್ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

5. ಸರ್ವೆ ನಂಬರ್ 105/2 ಎ ಜಮೀನಿನಲ್ಲಿ ಲೇ ಔಟ್ ಮಾಡುವ ಪೂರ್ವದಲ್ಲಿ ಪ್ಲಾನ್ ಮಂಜೂರು ಮಾಡಿಕೊಂಡಿರುತ್ತಾರೆ ಎಂದರೆ ಸುಳ್ಳು . ಸದರಿ ಪ್ಲಾನ್ ನ್ನು ಕೂಡ ನಾನೇ ಬೇರೆ ಬೇರೆ ಕೇಸಿನಲ್ಲಿ

ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ 1993 ರಿಂದ 95 ರವರೆಗೆ ಸದರಿ ಜಮೀನಿನಲ್ಲಿರುವ ಎಲ್ಲಾ ನಿವೇಶನಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

6. ಪ್ರತಿವಾದಿ 6 ರಿಂದ 17 ರವರು ಸದರಿ ಜಮೀನಿನಲ್ಲಿ ನಿವೇಶನಗಳನ್ನು ಸದರಿ ಅವಧಿಯಲ್ಲಿ ಖರೀದಿಸಿರುತ್ತಾರೆ ಎಂದು ವಾದ ಪತ್ರ ಮತ್ತು ನನ್ನ ಸಾಕ್ಷ್ಯ ದಲ್ಲಿ ಹೇಳಿರುತ್ತೇನೆ ಎಂದರೆ ಸರಿ . ಪುನಃ ಹೇಳುತ್ತೇನೆ ಸಾಕ್ಷಿಯು ಆ ರೀತಿಯು ಎಲ್ಲಿಯೂ ಹೇಳಿಲ್ಲ ಎಂದು ಹೇಳುತ್ತಾರೆ.

7. ಮೇಲೆ ಹೇಳಿದ ಸರ್ವೆ ನಂಬರ್ 105/2 ಎ ಕನ್ವರ್ಷನ್ ಆದೇಶ ಆದ ಮೇಲೆ ಮತ್ತು ಲೇಔಟ್ ಮಾಡಿದ ನಂತರ ಪ್ರತಿವಾದಿ 7 ರವರು ದಿ : 31.03.1995 ರ ನೋಂದಾಯಿತ ಕ್ರಯಪತ್ರದ ಮುಖಾಂತರ ನಿವೇಶನ ಸಂಖ್ಯೆ 212 ಖರೀದಿಸಿರುತ್ತಾರೆ ಎಂದರೆ ಸುಳ್ಳು . ಅದರಂತೆ ಸಂಬಂಧಪಟ್ಟ ಇಲಾಖೆಗೆ ಅರ್ಜಿಕೊಟ್ಟು ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 105/2 ಎ ಮತ್ತು ರಾಚನಹಳ್ಳಿಯ ಎಲ್ಲಾ ಜಮೀನುಗಳು ಈಗ ಅಂದರೆ ಸನ್ 2007 ರಲ್ಲಿ ಬಿಬಿಎಂಪಿ ವ್ಯಾಪ್ತಿಗೆ ಬಂದಿರುತ್ತವೆ . 7 ನೇ ಪ್ರತಿವಾದಿ ಬಿಬಿಎಂಪಿ

OS 3576/2007
PW1

ಯಲ್ಲಿ ತಮ್ಮ ಸೈಟಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಆಸ್ತಿ ತೆರಿಗೆ ಕೂಡ ಕಟ್ಟುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ಈ ಹಂತದಲ್ಲಿ ಹೆಚ್ಚಿನ ಪಾಟೀಸವಾಲನ್ನು ವಿನಂತಿಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಮತ್ತು ಸ. ಇ

(ಸಿ ಡಿ ಕರೋಶಿ)
5 ನೇ ಅಪರ ಸಿಟಿ ಸಿವಿಲ್ ಮತ್ತು ಸತ್ರ ನ್ಯಾಯಾಧೀಶರು,
ನ್ಯಾಯಾಂಗಣ 13, ಬೆಂಗಳೂರು ನಗರ .